# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/251/15-16

ದಿನಾಂಕ :16-09-2016

ಉಪಸ್ಥಿತರು: **ಶ್ರೀ ಲೋಕೇಶ್ ಪಿ.ಎನ್** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| 1.ಶ್ರೀಮತಿ ಮಂಗಳಮ್ಮ ಗಂಡ ಮಲ್ಲೇಶಪ್ಪ ಸಾ\|\| 76, 11ನೇ ವಾರ್ಡ, ಕಾರ್ ಸ್ಟ್ರೀಟ್ ಬಳ್ಳಾರಿ.<br><br>**(ಶ್ರೀ ಬಿ.ಎಂ.ಸುರೇಶ್, ವಕೀಲರು, ಬಳ್ಳಾರಿ)** | 1. ತಹಶೀಲ್ದಾರರು, ಬಳ್ಳಾರಿ<br>2. ಕಂದಾಯ ನೀರಿಕ್ಷಕರು, ಬಳ್ಳಾರಿ<br>3. ಗ್ರಾಮಲೆಕ್ಕಾಧಿಕಾರಿಗಳು, ಬಳ್ಳಾರಿ |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಬಳ್ಳಾರಿ | ಬಳ್ಳಾರಿ | 887ಬಿ/1 ಪೈಕಿ | 0.02.3/4 (0.02.75) |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು ಬಳ್ಳಾರಿ ಇವರ ಎಂ ಆರ್ ನಂ 453/1993-94 ದಿನಾಂಕ 08/07/1994 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಟಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ:16-09-2016 ಗಳಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಅವರ ವಕೀಲರು ಮುಖಾಂತರ ದಿನಾಂಕ: 16-09-2016 ರಂದು ಈ ನ್ಯಾಯಾಲಯಕ್ಕೆ ಹಾಜರಾಗಿ, ಬಳ್ಳಾರಿ ತಾಲ್ಲೂಕಿನ ಬಳ್ಳಾರಿ ಗ್ರಾಮದ ಸ.ನಂ 887ಬಿ/1 ಪೈಕಿ ವಿಸ್ತೀರ್ಣ: 0.02.3/4 (0.02.75) ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು ಬಳ್ಳಾರಿ ಇವರ ಎಂ ಆರ್ ನಂ 453/1993-94 ದಿನಾಂಕ 08/07/1994 ನ್ನು ರದ್ದು ಪಡಿಸುವಂತೆ ಕೋರುತ್ತಾ, ಸದರಿ ಜಮೀನನ್ನು ನೊಂದಾಯಿತ ಕ್ರಯ ಪತ್ರ ಸಂಖ್ಯೆ ದಿನಾಂಕ 16-03-1994 ರಂದು ಶ್ರೀ ಆರ್ ಬಲರಾಮುಡು ತಂದೆ ಆರ್ ಗೋವಿಂದಪ್ಪ ಇವರಿಂದ ಖರಿದೀಸಿದ್ದು ಕ್ರಯ ಪತ್ರದಂತೆ ಹಕ್ಕು ಬದಲಾವಣೆ ಮಾಡಿಕೊಡುವಂತೆ ಕೋರಿರುತ್ತಾರೆ.

ಮುಂದುವರೆದು ಪ್ರಕರಣದಲ್ಲಿನ ಲಭ್ಯ ದಾಖಲೆಗಳನ್ನು ಪರಿಶೀಲಿಸಲಾಗಿ ಕಂದಾಯ ನಿರೀಕ್ಷಕರು ಬಳ್ಳಾರಿ ಇವರ ಎಂ ಆರ್ ನಂ 453/1993-94 ದಿನಾಂಕ 08/07/1994 ರ ಆದೇಶದಲ್ಲಿ ಮನವಿದಾರರು ಖರೀದಿಸಿದ ಜಮೀನು ವ್ಯವಸಾಯ ಉದ್ದೇಶಕ್ಕೆಂದು ಕಂಡು ಬಂದಿರುವುದಿಲ್ಲ ಕಾರಣ ಗೈರು ಮಂಜೂರು ಮಾಡಿರುವುದು ಸಕಾರಣವಾಗಿಯೇ (ಕರ್ನಾಟಕ ಭೂ ಕಂದಾಯ ಕಾಯ್ದೆ 95 ರ ಉಲ್ಲಂಘನೆ ಕಾರಣ ) ಕಂಡುಬರುತ್ತದೆ, ಕಾರಣ ಈ ಕೆಳಕಂಡ ಆದೇಶ.

**ಮುಂದಿನ ಪುಟಕ್ಕೆ.....**